ಅಪೇಕ್ಷೆಗಳಿಗೆ ಬೆಲೆಯೇ ಇಲ್ಲ.'

ಸೌಂದ್ರಾಳ ಗೈನಕಾಲಜಿಸ್ಟ್ ಮತ್ತು ಫಿಸೀಶಿಯನ್ ಸಹ ಅವಳಿಗೆ ಸಾಕ್ಷಿಯಾದರು. ಅವರು ಕೋರ್ಟಿಗೆ ಬಂದು, ಸೌಂದ್ರಾಳ ಪ್ರೆಗ್ನೆನ್ಸಿ ಜಟಿಲ ಪ್ರೆಗ್ನೆನ್ಸಿಯಾಗಿದ್ದು, ಅದು ಸಾಮಾನ್ಯ ಪ್ರಸವವಾಗಿರಲಿಲ್ಲ, ಆಪರೇಷನ್‌ನಿಂದ ಮಕ್ಕಳು ಜನಿಸಿದ್ದರು, ಅವಳಿಗೆ ಯೋಗ್ಯ ಆರೈಕೆ ಮತ್ತು ವಿಶ್ರಾಂತಿಯ ಅಗತ್ಯ ತುಂಬಾ ಇತ್ತು ಎಂದರು.

ಇತ್ತ ನನ್ನ ವಕೀಲೆ, ನಾನೊಬ್ಬ ಜವಾಬ್ದಾರಿ ಮತ್ತು ಗುಣವಂತ ವ್ಯಕ್ತಿ, ಯಾರೊಂದಿಗೂ ಕೆಟ್ಟ ರೀತಿಯಲ್ಲಿ ವರ್ತಿಸಲಾರರು ಎಂದು ಸಾಬೀತು ಮಾಡುವಲ್ಲಿ ಮಗ್ನಳಾಗಿದ್ದಳು. ನನ್ನ ಶಾಲೆಯ ಅಧ್ಯಾಪಕರು, ನನ್ನ ಅಮ್ಮ, ರಿಸರ್ಚ್ ಕಂಪನಿಯ ಅಧಿಕಾರಿಗಳು ನನ್ನ ಸಾಕ್ಷಿಯಾದರು. ಪ್ರಿನ್ಸಿಪಾಲರು ನನ್ನ ಬಗ್ಗೆ, ಇವರು ಶಾಲೆಯಲ್ಲಿ ಎಲ್ಲರೊಂದಿಗೆ ಸೌಹಾರ್ದವಾಗಿ ವರ್ತಿಸುತ್ತಾರೆ, ಮಕ್ಕಳು ಸಹ ಇವರನ್ನು ಪ್ರೀತಿಸುತ್ತಾರೆ, ಇವರೊಬ್ಬ ಪರಿಪಕ್ವ ಮತ್ತು ಜವಾಬ್ದಾರಿಯುಳ್ಳ ಅಧ್ಯಾಪಕರು ಎಂದು ಹೇಳಿದರು.

ರಿಸರ್ಚ್ ಕಂಪನಿಯ ಅಧಿಕಾರಿ, 'ಇವರು ತಮ್ಮ ಪರಿವಾರದವರ ಸಂಖ್ಯೆ ಹೆಚ್ಚಿದ್ದರಿಂದ ಅತಿರಿಕ್ತ ಆದಾಯಕ್ಕಾಗಿ ನಮ್ಮ ಕಂಪನಿಯಲ್ಲಿ ರಿಸರ್ಚ್ ಪೇಪರ್‌ಗಳ ಪ್ರೂಫ್‌ರೀಡಿಂಗ್ ಕೆಲಸವನ್ನು ಮಾಡುತ್ತಿದ್ದಾರೆ. ಇವರು ತುಂಬಾ ನಿಷ್ಠೆಯಿಂದ ತಮ್ಮ ಕೆಲಸವನ್ನು ಮಾಡುತ್ತಾರೆ. ಇವರು ಪ್ರಾಮಾಣಿಕರು ಮತ್ತು ಕರ್ತವ್ಯನಿಷ್ಠರೂ ಆಗಿದ್ದಾರೆ' ಎಂದು ನನ್ನ ಪರವಾಗಿ ಸಾಕ್ಷಿ ಹೇಳಿದರು.

ಅಮ್ಮಂಗೆ ಮೊದಲು ಸೌಂದ್ರಾಳ ವಿರುದ್ಧ ಸಾಕ್ಷಿ ಹೇಳುವುದು ಇಷ್ಟವಾಗದೆ ಹೇಳಿದಳು, 'ಇದು ಹೇಗೆ ಸಾಧ್ಯ...? ನೈತಿಕತೆ ಎಂದರೆ ಇದೇನಾ! ಯಾವ ಹೆಣ್ಣು ನಮ್ಮ ಪರಿವಾರದ ವಂಶದ ಕುಡಿಗಳ ಜನನಕ್ಕೆ ಕಾರಣಳಾಗಿರುವಳೋ, ಅಂಥವಳ ವಿರುದ್ಧ ನಾನು ಹೇಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲಿ?' ಆದರೆ ಅವಳಿಗೆ ನ್ಯಾಯಾಲಯದಲ್ಲಿ ಅವಳ ಪುತ್ರನ ವಿರುದ್ಧ ಎಂತೆಂಥ ಆಪಾದನೆಗಳನ್ನು ಹೊರಿಸಲಾಗುತ್ತಿದೆ ಎಂಬ ವಿಷಯ ತಿಳಿದಾಗ ಅವಳು ನನಗಾಗಿ ಸಾಕ್ಷಿ ಹೇಳಲು ಒಪ್ಪಿದಳು.

ಅಮ್ಮ ಕೋರ್ಟಿಗೆ ಬಂದು, ಕಟಕಟೆಯಲ್ಲಿ ನಿಂತು ಪ್ರಮಾಣ ಮಾಡಿ, 'ನಾನು ಸೌಂದ್ರಾಳ ಹೆರಿಗೆಯ ವೇಳೆಯಲ್ಲಿ ಅವರ ಮನೆಗೆ ಹೋದಾಗ, ನನಗೆ ಸೌಂದ್ರಾಳ ವರ್ತನೆಯನ್ನು ನೋಡಿ ತುಂಬಾ ವಿಚಿತ್ರವೆಂದು ಅನ್ನಿಸಿತು. ನಾನು ಅವಳಿಗೆ, ಮಕ್ಕಳನ್ನು ನೋಡಿಕೊಳ್ಳಲು ನಿಮ್ಮ ಮನೆಯಲ್ಲಿ ಕೆಲವು ದಿನ ಇರುತ್ತೇನೆ ಎಂದೆ. ಆದರೆ ಸೌಂದ್ರಾ ಇದಕ್ಕೊಪ್ಪದೆ, ನನಗೆ ಮನೆಯಿಂದ ಹೊರಗೆ ಹೋಗಲು ಹೇಳಿದಳು' ಎಂದು ಸಾಕ್ಷಿ ಹೇಳಿದಳು.

ಅಮ್ಮ ನ್ಯಾಯಾಧೀಶರನ್ನು ನೋಡುತ್ತಾ ಭಾವುಕಳಾಗಿ ಹೇಳಿದಳು, 'ಮೈ ಲಾರ್ಡ್, ಸೌಂದ್ರಾಳ ಸ್ವಭಾವದಿಂದಾಗಿ ಮನೆಯಲ್ಲಿ ಅಶಾಂತಿ ನೆಲೆಸಿತ್ತು, ಹೀಗಾಗಿ ನನ್ನ ಮಗ ಆ ಮನೆಯನ್ನು ತ್ಯಜಿಸುವುದರಲ್ಲೇ ಶಾಂತಿಯಿತ್ತು. ಸೌಂದ್ರಾ ಮತ್ತು ಅವಳ ಮಕ್ಕಳು ಆರಾಮಾಗಿ ಮಲಗಲೆಂದು ನನ್ನ ಮಗ ಬೆಡ್‌ರೂಮಿನಲ್ಲಿದ್ದ ಸಣ್ಣ ಸೋಫಾದಲ್ಲಿ ಬಹು ಕಷ್ಟದಿಂದ ಮಲಗುತ್ತಿದ್ದ. ಇದು ಅವನ ತ್ಯಾಗವಾಗಿತ್ತು, ಸ್ವಾರ್ಥವಲ್ಲ. ತನ್ನ ಕುಟುಂಬಕ್ಕೆ ಹಣ ಒದಗಿಸಲು, ತನ್ನ ಹೆಂಡತಿ ಮತ್ತು ಮಕ್ಕಳು ಸುಖವಾಗಿರಬೇಕೆಂದು ರಾತ್ರಿಯೆಲ್ಲಾ ಎಚ್ಚರವಾಗಿದ್ದು ಪ್ರೂಫ್‌ರೀಡಿಂಗ್ ಕೆಲಸವನ್ನು ಮಾಡುತ್ತಿದ್ದ.'

ಸೌಂದ್ರಾಳ ತವರು ಮನೆಯವರು ಯಾರೂ ಇರಲಿಲ್ಲ. ಅವಳ ತಾಯಿ, ಅವಳ ತಂದೆಯನ್ನು ತ್ಯಜಿಸಿ ಒಬ್ಬ ಯುವಕನೊಂದಿಗೆ ಓಡಿ ಹೋಗಿದ್ದಳು, ಆಗ ಸೌಂದ್ರಾ ಮತ್ತು ಅವಳ ತಮ್ಮ ತುಂಬಾ ಚಿಕ್ಕವರಾಗಿದ್ದರು. ಸೌಂದ್ರಾಗೆ ತನ್ನ ತಾಯಿಯೊಂದಿಗೆ ಸಂಪರ್ಕವಿರಲಿಲ್ಲ. ತಂದೆ ದ್ವೀಪವೊಂದರಲ್ಲಿ ತಮ್ಮ ಎರಡನೆಯ ಹೆಂಡತಿಯೊಂದಿಗಿದ್ದು, ಮೋಜು ಮಸ್ತಿಯಲ್ಲಿದ್ದರು.

ಸೌಂದ್ರಾ ಕಟಕಟೆಯಲ್ಲಿ ನಿಂತಾಗ ಇಡೀ ನ್ಯಾಯಾಲಯ ಕುತೂಹಲದಿಂದಾಗಿ ನಿಶ್ಶಬ್ದವಾಯಿತು. ಅವಳ ವಕೀಲರು ಅವಳಿಗೆ ಎರಡು ಪ್ರಶ್ನೆಗಳನ್ನು ಕೇಳಿದರು, 'ನಿಮ್ಮ ಪತಿ ನಿಮ್ಮನ್ನು ತ್ಯಜಿಸಿ ಹೋದ ವಿಷಯ ನಿಮಗೆ ಯಾವಾಗ ಮತ್ತು ಹೇಗೆ ತಿಳಿಯಿತು?'

ಸೌಂದ್ರಾ ತುಂಬಿ ಬಂದ ಕಣ್ಣುಗಳಿಂದ, ಕಂಪಿಸುವ ಧ್ವನಿಯಲ್ಲಿ ಹೇಳಿದಳು, 'ನಾನು ಅಲ್ಮಾರಿನಲ್ಲಿ ನೋಡಿದಾಗ ಅವರ ಬಟ್ಟೆಗಳು ಇರಲಿಲ್ಲ, ಅವರ ಲ್ಯಾಪ್‌ಟಾಪ್, ಅವರ ಇನ್ನಿತರ ವಸ್ತುಗಳು ಮನೆಯಲ್ಲಿರಲಿಲ್ಲ. ಅವರು ತುಂಬಾ ದಿನಗಳು ಕಳೆದರೂ ಮನೆಗೆ ಬರಲಿಲ್ಲ. ಅವರ ಫೋನ್ ಸಹ ಬರಲಿಲ್ಲ.'

'ನೀವು ಅವರನ್ನು ಹೇಗೆ ಹುಡುಕಿದಿರಿ?'

'ಅವರ ಮಿತ್ರರಿಗೆ ಫೋನ್ ಮಾಡಿದೆ, ಅವರ ತಂದೆ–ತಾಯಿ, ಸಹೋದರ–ಸಹೋದರಿಯರಿಗೆ ಫೋನ್ ಮಾಡಿದೆ, ಕಡೆಗೆ ಅವರ ಶಾಲೆಗೆ ಹೋದೆ. ಅಲ್ಲಿ ಅವರ ಭೇಟಿಯಾಯಿತು.'

ನನ್ನ ವಕೀಲೆ ಎದ್ದು ನಿಂತು ತರಾಟೆಗೆ ತೆಗೆದುಕೊಂಡಳು, 'ನೀವು ಅವರ ಶಾಲೆಗೆ ಹೋಗಿ, ಅಲ್ಲಿಯ ಸ್ಟಾಫ್ ಮತ್ತು ಸ್ಟೂಡೆಂಟ್ಸ್ ಎದುರು ಮಿಸ್ಟರ್ ಸ್ಕಾಟ್‌ರನ್ನು ನಿಂದಿಸಿದ್ದು ನಿಜವೇ? ಅವರನ್ನು ಥಳಿಸಲು ಮುಂದಾಗಿ, ಅವರ ಶರ್ಟ್‌ಅನ್ನು ಸಹ ಹರಿದಿರಿ, ಇದು ನಿಜವಲ್ಲವೇ?'

ಸೌಂದ್ರಾ ಮೌನ ವಹಿಸಿದಳು, ಯಾವ ಉತ್ತರವನ್ನು ಕೊಡಲಿಲ್ಲ. ಅವಳ ವಕೀಲೆ ಅವಳನ್ನು ಪಾರು ಮಾಡುತ್ತಾ ಹೇಳಿದಳು, 'ಇದು ಅಸಂಬದ್ಧ ಮತ್ತು ಅಪ್ರಾಸಂಗಿಕ ಆರೋಪವಾಗಿದೆ. ಕೇಸಿಗೂ ಅದಕ್ಕೂ ಸಂಬಂಧವಿಲ್ಲ.'

'ಇದು ಅಸಂಬದ್ಧ ಆರೋಪಗಳಲ್ಲ'. ಹೀಗೆಂದು ನನ್ನ ವಕೀಲೆ ನ್ಯಾಯಾಧೀಶರನ್ನು ನೋಡಿದಳು. ನ್ಯಾಯಾಧೀಶರು ಮುಂದುವರೆಸಲು ಹೇಳಿದರು.

ನನ್ನ ವಕೀಲೆ ಸೌಂದ್ರಾಗೆ ಕೇಳಿದಳು, 'ನೀವು ನೌಕರಿ ಮಾಡುವುದಿಲ್ಲ. ನಿಮ್ಮ ಮತ್ತು ನಿಮ್ಮ ಮಕ್ಕಳ ಖರ್ಚು ವೆಚ್ಚಗಳಿಗೆ ಏನು ಮಾಡುತ್ತೀರಿ?'

ಸೌಂದ್ರಾ ನನ್ನೆಡೆಗೆ ಸಂಜ್ಞೆ ಮಾಡುತ್ತಾ ಹೇಳಿದಳು, 'ಇವರು ಕೊಡ್ತಾರೆ.'

ನನ್ನ ವಕೀಲೆ ನ್ಯಾಯಾಧೀಶರೆಡೆಗೆ ಹೊರಳಿ ಹೇಳಿದಳು, 'ಮೈ ಲಾರ್ಡ್, ಮಿಸ್ ಸೌಂದ್ರಾ ಸ್ಕಾಟ್‌ರ ಮಾನಸಿಕ ಆರೋಗ್ಯ ಹದಗೆಟ್ಟಿದೆ. ಅವರೊಂದಿಗೆ ನನ್ನ ಕಕ್ಷಿದಾರರು ವಾಸವಿರುವುದು ಸಾಧ್ಯವಿರಲಿಲ್ಲ.'

ಸೌಂದ್ರಾ ರೋದಿಸಿದಳು. ನನಗೆ ಅವಳ ಬಗ್ಗೆ ಕರುಣೆ ಮೂಡಿತು. ನಾನು ಅವಳ ಅಹಿತವನ್ನು ಬಯಸುತ್ತಿರಲಿಲ್ಲ. ನಾನು ಅವಳ ಒಳಿತನ್ನಷ್ಟೇ ಬಯಸುತ್ತಿದ್ದೆ. ಆದರೆ ನಾನು ಅವಳೊಂದಿಗಿರಲು ಸಾಧ್ಯವಿರಲಿಲ್ಲ; ಅವಳೊಂದಿಗಿದ್ದು ಜೀವಮಾನವಿಡಿ ಹೋರಾಡಲು ಸಾಧ್ಯವಿರಲಿಲ್ಲ.

ಕಡೆಗೆ ನ್ಯಾಯಾಧೀಶರ ತೀರ್ಮಾನ ಸೌಂದ್ರಾಳ ಪರಿವಾಗಿಯೇ ಬಂತು. ಅವಳಿಗೆ ಮಕ್ಕಳ ಕಸ್ಟಡಿ ಲಭಿಸಿತು. ನನಗೆ ವಿಸಿಟಿಂಗ್ ರೈಟ್ಸ್ ಮಾತ್ರ ಸಿಕ್ಕಿತು. ಹಾಂ, ಮಕ್ಕಳಿಗೆ ಸಂಬಂಧಿಸಿದ ಪ್ರಮುಖ ತೀರ್ಮಾನಗಳಲ್ಲಿ ತಂದೆ–ತಾಯಿ ಇಬ್ಬರ ಒಪ್ಪಿಗೆ ಅನಿವಾರ್ಯವಾಗಿತ್ತು. ನಾನು ತಂದೆಯಾದ್ದರಿಂದ, ನನ್ನ ಮಕ್ಕಳು ವಯಸ್ಸಿಗೆ ಬರುವವರೆಗೆ ಅವರ ಖರ್ಚು ವೆಚ್ಚಗಳನ್ನು ಕೊಡಬೇಕಿತ್ತು; ಸೌಂದ್ರಾ ಕೆಲಸಕ್ಕೆ ಹೋಗುವವರೆಗೆ ಅಥವಾ ಬೇರೆ ಜೀವನ ಸಂಗಾತಿಯನ್ನು ಆಯ್ಕೆ ಮಾಡಿ, ಆರ್ಥಿಕವಾಗಿ ಸ್ವತಂತ್ರಳಾಗುವವರೆಗೆ ನಾನು ಅವಳ ಎಲ್ಲಾ ಖರ್ಚು ವೆಚ್ಚಗಳನ್ನು ಭರಿಸಬೇಕಿತ್ತು.

ಘಟನೆಗಳು ಹಿಂದಕ್ಕೆ ಎಷ್ಟು ಬೇಗ ಸಂದು ಹೋದವು... ಈಗ ಎಲ್ಲವೂ ಕಳೆದು ಹೋದ ಸಂಗತಿಯೆಂದು ತೋರುತ್ತದೆ. ನಾನು ಆಗಾಗ ಲೂಸಿ ಮತ್ತು ಗ್ರೇಸಿಗೆ, ನಿಮ್ಮ ಮಮ್ಮಿ ತನ್ನ ಎರಡನೆಯ ಪತಿಯೊಂದಿಗೆ ಹೇಗಿದ್ದಾಳೆ ಎಂದು ಕೆದಕಿ ಕೇಳುತ್ತೇನೆ. ಅವರು ಏನೂ ಹೇಳದೆ, 'ಐ ಲವ್ ಯೂ ಡ್ಯಾಡಿ' ಎಂದಷ್ಟೇ ಹೇಳಿ ನನ್ನ ಮಾತನ್ನು ಅಲ್ಲಗಳೆಯುತ್ತಾರೆ. ಆದರೆ ನೀನಾಳೊಂದಿಗೆ ನನ್ನ ಬ್ರೇಕ್ ಅಪ್ ಆದಾಗ ಒಮ್ಮೆ ಮಾತ್ರ ಹೇಳಿದ್ದರು... ಮಮ್ಮಿ ತಮ್ಮ ಎರಡನೆಯ ಪತಿಯೊಂದಿಗೆ ಚೆನ್ನಾಗಿದ್ದಾರೆ. ಇದನ್ನು ಕೇಳಿ ನಾನು ಸಂತೋಷಪಡಬೇಕಿತ್ತು. ಅವರಿಬ್ಬರು ಚೆನ್ನಾಗಿದ್ದಾರೆ ಎಂದರೆ ಲೂಸಿ ಮತ್ತು ಗ್ರೇಸಿಗೆ ಒಂದು ಸ್ಥಿರವಾದ ಮನೆ ಲಭಿಸಿತ್ತು. ಆದರೆ ಈ ವಿಷಯ ನನ್ನ ಮನಸ್ಸಿನಲ್ಲಿ ಹೊಟ್ಟೆಕಿಚ್ಚಿಗೆ ಕಾರಣವಾಗಿತ್ತು.

ನಾನು ಮುಲುಗುಟ್ಟಿದೆ, ಒಂದು ಕೊಂಬೆಯ ತುಂಡಿಗೆ ಅಕಸ್ಮಾತ್ ನನ್ನ ಕಾಲು ಡಿಕ್ಕಿ ಹೊಡೆಯಿತು. ನಾನು ಮರವೊಂದರಿಂದ ತುಂಡಾಗಿ ಬಿದ್ದಿದ್ದ ಕೊಂಬೆಯನ್ನು ಗಮನಿಸಲಿಲ್ಲ. ಡಿಕ್ಕಿ ಹೊಡೆದ ರಭಸಕ್ಕೆ ತಡಬಡಿಸಿ ಕೆಳಗೆ ಬಿದ್ದೆ. ನಂತರ ಅಲ್ಲಿಯೇ ರಸ್ತೆಯಲ್ಲಿ ಕೂತು ಗಾಯಗೊಂಡ ಕಾಲನ್ನು ನೇವರಿಸಿಕೊಂಡೆ.

ಈ ತುಂಡು ಎಲ್ಲಿಂದ ಬಂತು? ಹೀಗೆಂದು ಯೋಚಿಸಿ ಮೊಬೈಲ್ ಟಾರ್ಚ್‌ನಿಂದ ಬೆಳಕು ಬಿಡುತ್ತಾ ಸುತ್ತಮುತ್ತ ನೋಡಿದೆ; ರಸ್ತೆಯ ಆಚೆಗೆ ಅನೇಕ ಮರ ಗಿಡಗಳು ಬಿದ್ದಿದ್ದವು, ಕೆಲವು ಮರಗಳ ಬೇರುಗಳಷ್ಟೇ ನೆಲದಲ್ಲಿ ಹೂತಿದ್ದವು. ಅವುಗಳ ಕೊಂಬೆಗಳು ಸುತ್ತಮುತ್ತ ಅನಾಥವಾಗಿ ಬಿದ್ದಿದ್ದವು. ಶಿಶಿರ ಋತುವಿನ ನಂತರ ಚಿಗುರಿದ್ದ ಕೊಂಬೆಗಳು ಬೇರಿನಿಂದ ಬೇರ್ಪಟ್ಟು ಬಾಡಲಾರಂಭಿಸಿದ್ದವು.